**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ:** 5016/2025 ಪ್ರಾಸಾ-09

ಚಾಸಾ-01

ದಿನಾಂಕಃ 26-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಲಕ್ಷ್ಮೀಕಾಂತ |
| **ತಂದೆಯ / ಗಂಡನ ಹೆಸರು** | ಹನುಮಂತರಾಯಪ್ಪ |
| **ವಯಸ್ಸು** | 42 |
| **ಉದ್ಯೋಗ** | ಗಾರೆಕೆಲಸ |
| **ವಾಸಸ್ಥಳ** | ಮಲ್ಲೇಕಾವು |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ಚಾಸಾ-2 ನನ್ನ ತಂದೆ, ಚಾಸಾ-3 ನನ್ನ ಹೆಂಡತಿ, ಆರೋಪಿ ನನ್ನ ಚಿಕ್ಕಪ್ಪ. ಆರೋಪಿ ಮತ್ತು ನಮ್ಮ ನಡುವೆ ಜಮೀನಿನ ವಿಚಾರಕ್ಕೆ ತಕರಾರು ಇತ್ತು. ಈ ಪ್ರಕರಣದ ಬಗ್ಗೆ ನನಗೆ ಏನು ಮಾಹಿತಿ ಇರುವುದಿಲ್ಲ, ಘಟನೆಯ ಸಮಯದಲ್ಲಿ ನಾನು ಕೆಲಸಕ್ಕೆ ಹೋಗಿದ್ದೆ ನಂತರದಲ್ಲಿ ನನಗೆ ಯಾವುದೇ ವಿಷಯ ಗೊತ್ತಾಗಿರುವುದಿಲ್ಲ. ದೇವರಾಜು ಎನ್ನುವವರು ನನಗೆ ಪೋನ್ ಮಾಡಿ ಮನೆ ಹತ್ತಿರ ಬೇಗ ಬರುವಂತೆ ಹೇಳಿದ್ದು ಅದರಂತೆ ನಾನು ಬಂದಿರುತ್ತೇನೆ. ನಾನು ಬರುವಷ್ಟರಲ್ಲಿ ನನ್ನ ಹೆಂಡತಿ , ನನ್ನ ಅತ್ತೆ ಮತ್ತು ನನ್ನ ತಂದೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನನ್ನ ತಂದೆಗೆ ತಲೆಗೆ , ಕಾಲಿಗೆ ಗಾಯ ಆಗಿತ್ತು. ನನ್ನ ತಂದೆಗೆ ಯಾವ ಕಾರಣಕ್ಕೆ ಗಾಯವಾಗಿತ್ತು ಮತ್ತು ಯಾರು ಹಲ್ಲೆ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿರುವ ದೂರನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ದೂರನುನ ನಿಪಿ-14 ಎಂದು, ಸಾಕ್ಷಿ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ನಿಪಿ-14 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ, ನಿಪಿ-14 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ನಾನು ಯಾರಿಗೂ ಮಾಹಿತಿ ಕೊಟ್ಟಿರುವುದಿಲ್ಲ. ಆರೋಪಿ ಯಾವುದೇ ತಪ್ಪು ಮಾಡಿರುವುದಿಲ್ಲ.

**ಚಾಸಾ-01**

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ದಿ.27.04.2024 ರಂದು ನಾನು ಮಲ್ಲೇಕವು ಹೊಸಬಡಾವಣೆಯಲ್ಲಿ ಗಾರೆ ಕೆಲಸಕ್ಕೆ ಹೋಗಿದ್ದಾಗ ಸಾಯಂಕಾಲ 5-45 ಗಂಟೆಗೆ ಚಾಸಾ-3 ನನ್ನ ಹೆಂಡತಿ ಫೋನ್ ಮಾಡಿ ಆರೋಪಿ ಚಾಕು ಮತ್ತು ಮಚ್ಚಿನಿಂದ ಚಾಸಾ-2 ರವರಿಗೆ ಹಲ್ಲೆ ಮಾಡಿರುತ್ತಾರೆ ಬೇಗ ಬನ್ನಿ ಎಂದು ತಿಳಿಸಿದಳು ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿ ವಿಚಾರ ಮಾಡಲಾಗಿ ಚಾಸಾ-3 ರವರು ನಾನು ಮತ್ತು ಚಾಸಾ-2 ನಮ್ಮ ಮನೆ ಬಳಿ ಆರೋಪಿ ನಮ್ಮ ಮನೆ ಹತ್ತಿರ ಬಂದು ಅವಾಚ್ಯ ಶಬ್ದಗಳಿಂದ ಬೈದು ಜಮೀನು ಕೊಡುವುದಿಲ್ಲವೇನು ನಮ್ಮ ಹೆಸರಿಗೆ ದಾಖಲೆಗಳನ್ನು ಮಾಡಿಸಿಕೊಡುವುದಿಲ್ಲವೇನು ಎಂದು ಅವಾಚ್ಯ ಶಬ್ದಗಳಿಂದ ಬೈದನು , ಆಗ ಚಾಸಾ-2 ರವರು 4 ಜನರಿಗೆ ಸಮಾನವಾಗಿ ಜಮೀನು ಕೊಟ್ಟಿದ್ದೇನೆ ಎಂದು ಹೇಳಿದಾಗ ಆರೋಪಿ ತಾನು ತಂದಿದ್ದ ಡ್ರಾಗನ್ ನಿಂದ ಚಾಸಾ-2 ರವರಿಗೆ ಕೊಲೆ ಮಾಡು ಉದ್ದೇಶದಿಂದ ತಲೆಗೆ ಚುಚ್ಚಿ ರಕ್ತಗಾಯಪಡಿಸಿ ಕೆಳಗೆ ಕೆಡವಿಕೊಂಡು ಮಚ್ಚನ್ನು ತೆಗೆದುಕೊಂಡು ನಮ್ಮ ಮಾವನ ಬಲಗೈ , ಎಡಕಾಲಿನ ಮೊಣಕಾಲಿನ ಕೆಳ ಭಾಗಕ್ಕೆ ಹೊಡೆದು ಕೊಲೆ ಮಾಡಲು ಪ್ರಯತ್ನಿಸಿದನು ಅಷ್ಟರಲ್ಲಿ ನಾನು ಚಾಸಾ-4 ಬಂದು ಇಬ್ಬರು ಜೊರಾಗಿ ಕೂಗಿದಾಗ ಆರೋಪಿ ರಾಮಚಂದ್ರ ಈ ದಿನ ನೀನು ಬದುಕಿಕೊಂಡೆ ಮುಂದೊಂದು ದಿನ ನಿನಗೆ ಗತಿ ಕಾಣಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿ ಡ್ರಾಗನ್ ಮತ್ತು ಮಚ್ಚನ್ನು ಸ್ಥಳದಲ್ಲಿಯೇ ಬಿಸಾಗಿ ಹೊರಟುಹೋದನು ಎಂದು ನನಗೆ ತಿಳಿಸಿದಳು ಎಂದರೆ ಸರಿಯಲ್ಲ.

ಈಗ ಓದಿ ಹೇಳಿದ ನಿಪಿ-14 ರಂತೆ ಪಿರ್ಯಾದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಚಿಕ್ಕಪ್ಪನಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**